# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1157 |
| ಸದಸ್ಯರ ಹೆಸರು | : | ಶ್ರೀ ಸುನೀಲ್‌ಗೌಡ ಬಿ ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.03.2026. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ)ರಡಿ ವಿಚಾರಣೆ ನಡೆಸಿ ಸರಕಾರದ ಆದೇಶ ಸಂಖ್ಯೆ:ಗ್ರಾಅಪ 14 ಗ್ರಾಪಂಅ 2020 ದಿನಾಂಕ:11.02.2020ರಲ್ಲಿ. ತಂಗಡಗಿ ಕುಂಚಗನೂರ ರಸ್ತೆಯಲ್ಲಿನ, ಸಿ.ಸಿ. ಚರಂಡಿ ಕಾಮಗಾರಿಯು ಉತ್ತಮ ಗುಣಮಟ್ಟದಾಗಿರುವುದಿಲ್ಲವೆಂಬ ಆರೋಪವು ಸಾಭೀತಾಗಿರುವುದಿಲ್ಲ ಎಂದು ಆದೇಶ ಹೊರಡಿಸಿರುವುದು ನಿಜವೇ; (ಆದೇಶದ ಪ್ರತಿ ಒದಗಿಸುವುದು) | ಹೌದು.<br><br>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 14 ಗ್ರಾಪಂಅ 2020 ಬೆಂಗಳೂರು, ದಿನಾಂಕ: 11-02-2020 ರ ಪ್ರತಿಯನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಸದರಿ ಆದೇಶದ ವಿರುದ್ಧ ಆರೋಪಗಳನ್ನು ಮಾಡಿದ ದೂರುದಾರರು ಸರ್ಕಾರದ ಹಂತದಲ್ಲಿ ಪುನರ್ ಪರಿಶೀಲನೆ ಅಥವಾ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆಯೇ: ಸಲ್ಲಿಸಿದ್ದಲ್ಲಿ ಇದರ ವಿವರ ಒದಗಿಸುವುದು: | ಸರ್ಕಾರದ ಹಂತದಲ್ಲಿ ಪುನರ್ ಪರಿಶೀಲನೆ ಅರ್ಜಿ ಅಥವಾ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿರುವ ಬಗ್ಗೆ ಮಾಹಿತಿ ಇರುವುದಿಲ್ಲ. |
| ಇ) | ದಿನಾಂಕ:11.02.2020ರ ಆದೇಶವನ್ನು ಸರ್ಕಾರದ ಹಂತದಲ್ಲಿ ಬದಲಾವಣೆ ಅಥವಾ ರದ್ದು ಮಾಡಲಾಗಿದೆಯೇ: ಮಾಡಿದ್ದಲ್ಲಿ. ಆದೇಶ ಪ್ರತಿ ಒದಗಿಸುವುದು; | ಇಲ್ಲ. |
| ಈ) | ತಂಗಡಗಿ ಕುಂಚಗನೂರ ರಸ್ತೆಯಲ್ಲಿನ. ಸಿ.ಸಿ. ಚರಂಡಿ ಕಾಮಗಾರಿಯ ಬಿಲ್ ಪಾವತಿ ಮಾಡದಂತೆ ಸರ್ಕಾರ ಆದೇಶ ಹೊರಡಿಸಿದೆಯೇ: ಹೊರಡಿಸಿದ್ದಲ್ಲಿ ಆದೇಶದ ಪ್ರತಿ ಒದಗಿಸುವುದು; | ಇಲ್ಲ. |

| | | |
|---|---|---|
| ಉ) | ದಿನಾಂಕ:11.02.2020ರ ಆದೇಶ ಬಂದ ನಂತರ ಸದರಿ ಕಾಮಗಾರಿಯ ಹಣ ಪಾವತಿಯಾದಲ್ಲಿ, ಈ ಕಾಮಗಾರಿ ಗುಣಮಟ್ಟದ ಬಗ್ಗೆ ಮರು ತನಿಖೆಗೆ ಅವಕಾಶ ನೀಡುವ ಸರ್ಕಾರದ ನಿಯಮದ ಪ್ರತಿ ಒದಗಿಸುವುದು; | ಮರು ತನಿಖೆ ಮಾಡುವ ಬಗ್ಗೆ ನಿಯಮಗಳು ಇರುವುದಿಲ್ಲ. |
| ಊ) | ಎಮ್.ಜಿ.ಎನ್.ಆರ್.ಎ.ಜಿ ಯೋಜನೆಯ ಕಾರ್ಯಾರಚಣೆ ಮಾರ್ಗಸೂಚಿ 2013 ರ ಅಧ್ಯಾಯ 14.6 ಹಾಗೂ ಸನ್ 2022-23ನೇ ಸಾಲಿನ ಸಂಯುಕ್ತ ಸುತ್ತೋಲೆಗಳ ಅಧ್ಯಾಯ 20.2 ರಲ್ಲಿ ತಿಳಿಸಿದಂತೆ ಈ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳಿಗೆ ಆಂತರಿಕ ಗುಣಮಟ್ಟ ಕಾಪಾಡಲು ಜವಾಬ್ದಾರಿ ಹೊಂದಿರುವವರು ಯಾರು: ಮತ್ತು ಅಧ್ಯಾಯ 14.7ರಲ್ಲಿ ಈ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳಿಗೆ ಪರಿಶೀಲನೆ/ಮಾಪನ ಮತ್ತು ವಿಶ್ಲೇಷಣೆ ಮಾಡುವ ಅಧಿಕಾರ ಹೊಂದಿರುವವರು ಯಾರು? | ಎಮ್.ಜಿ.ಎನ್.ಆರ್.ಎ.ಜಿ ಯೋಜನೆಯ ಕಾರ್ಯಾರಚಣೆ ಮಾರ್ಗಸೂಚಿ2013 ರ ಅಧ್ಯಾಯ 14.6 ಹಾಗೂ ಸನ್ 2022-23ನೇ ಸಾಲಿನ ಸಂಯುಕ್ತ ಸುತ್ತೋಲೆಗಳ ಅಧ್ಯಾಯ 20.2 ರಲ್ಲಿ ತಿಳಿಸಿದಂತೆ ಈ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳಿಗೆ ಆಂತರಿಕ ಗುಣಮಟ್ಟ ಕಾಪಾಡಲು ಜವಾಬ್ದಾರಿ ಹೊಂದಿರುವವರು ತಾಂತ್ರಿಕ ಸಹಾಯಕರು.<br><br>ಅಧ್ಯಾಯ 14.7 ರಲ್ಲಿ ಈ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳಿಗೆ ಪರಿಶೀಲನೆ/ ಮಾಪನ ಮತ್ತು ವಿಶ್ಲೇಷಣೆ ಮಾಡುವ ಅಧಿಕಾರ ಹೊಂದಿರುವವರು ರಾಜ್ಯ ಗುಣ ನಿಯಂತ್ರಣ ಮಾನಿಟರ್/ಜಿಲ್ಲಾ ಗುಣ ನಿಯಂತ್ರಣ ಮಾನಿಟರ್. |

ಸಂಖ್ಯೆ: ಗ್ರಾಅಪ 239 ಗ್ರಾಪಂಅ 2026

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.